ದಿನಾಂಕಃ 22-04-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು 2 ನೇ ಪ್ರತಿವಾದಿ ಪರ ವಕೀಲರಾದ ಶ್ರೀ. ಪಿ ಎಸ್ ಬಿ ವಕೀಲರಿಂದ

ನೀವು ಚಿಂತಾಮಣಿ ನ್ಯಾಯಾಲಯಗಳಲ್ಲಿ ಹಲವಾರು ದಾವೆಗಳಲ್ಲಿ ಪಕ್ಷಗಾರಾಗಿರುತ್ತೀರಿ ಎಂದರೆ ಹೌದು. ಈ ದಾವೆಯಲ್ಲಿ ನಿಮ್ಮ ವಕೀಲರಿಗೆ ಮಾಹಿತಿ ಯಾರು ಕೊಟ್ಟಿರುತ್ತಾರೆ ಎಂದರೆ ನಾನು ನನ್ನ ಸೊಸೆಯವರು ಕೊಟ್ಟಿರುತ್ತೇವೆ. 43 ಸರ್ವೆ ನಂಬರ್ ಬಗ್ಗೆ ದಾವೆ ಸಲ್ಲಿಸಲು ಹೇಳಿರುತ್ತೇವೆ. ಸರ್ವೆ ನಂ. 43 ನಿಮ್ಮ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಇಲ್ಲ. ಸರ್ವೆ ನಂ. 43 ನಿಮಗೆ ಸೇರಿದೆ ಎಂದು ತೋರಿಸಲು ಏನೂ ದಾಖಲೆ ಕೊಟ್ಟಿರುವುದಿಲ್ಲ ಎಂದರೆ ಕೊಟ್ಟಿರುವುದಿಲ್ಲ. ಈ ಹಿಂದೆ ಯಾವತ್ತೂ ಸಹ ಸರ್ವೆ ನಂ. 43 ನಿಮಗೆ ಸೇರಿದೆ ಎಂದು ತೋರಿಸಲು ದಾಖಲೆ ಕೊಟ್ಟಿರುವುದಿಲ್ಲ ಎಂದರೆ ದಾಖಲೆಯನ್ನು ಕೊಟ್ಟಿರುವುದಿಲ್ಲ ಅನುಭೋಗದಲ್ಲಿ ಇರುತ್ತೇವೆ. ಸರ್ವೆ ನಂ. 43 ಒಟ್ಟು 24 ಎಕರೆ 14 ಗುಂಟೆ ಇದೆ ಎಂದರೆ ಇರಬಹುದು ನಾವು ಅನುಭವದಲ್ಲಿ ಇರುವುದು 1 ಎಕರೆಯಲ್ಲಿ.

ಶಾರದಮ್ಮ ಎನ್ನುವವರು ನಿಮ್ಮ ಮೇಲೆ ಮತ್ತು ಇತರರ ಮೇಲೆ ಒಎಸ್ ನಂ. 104/2005 ದಾವೆಯನ್ನು ಹಾಕಿರುತ್ತಾರೆ ಎಂದರೆ ಸರಿ. ಆ ದಾವೆಯಲ್ಲಿ ಸರ್ವೆ ನಂ. 82 ರಲ್ಲಿ 1 ಎಕರೆ ಜಮೀನು ಸೇರಿಸಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ. 82 ರ ಚೆಕ್ಕುಬಂದಿ ಗೊತ್ತಿದೆ. ಪೂರ್ವಕ್ಕೆ 124, ಪಶ್ಚಿಮಕ್ಕೆ ರಸ್ತೆ , ಉತ್ತರಕ್ಕೆ ನಮ್ಮದೇ ಜಮೀನು ದಕ್ಷಿಣಕ್ಕೆ ಸರ್ವೆ ನಂ. 43 ಇದ್ದು ಆದರೆ ಅದು ಯಾರದ್ದು ಅಂತ ಇಲ್ಲ. ಸರ್ವೆ ನಂ. 82 ನನ್ನ ಯಜಮಾನರಾದ ಶಂಕರ್ ನಾರಾಯಣ ರವರ ಹೆಸರಿನಲ್ಲಿ ಇದೆ. ಸರ್ವೆ ನಂ. 82 ರ ದಕ್ಷಿಣಕ್ಕೆ ಇರುವ ಸರ್ವೆ ನಂ. 43 ಕ್ಕೆ ಸಂಬಂಧಿಸಿದಂತೆ ನಿಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸಾಕ್ಷಿಯು ನಾವು ಸ್ವಾಧೀನ ಇರುತ್ತೇವೆ ಹಕ್ಕು ಇರುವುದಿಲ್ಲ. ನೀವು ಸರ್ವೆ ನಂ. 43 ರಲ್ಲಿ ಸ್ವಾಧೀನ ಇರುತ್ತೀರಿ ಎಂದು ತೋರಿಸಲು ಪಹಣಿ ಹಾಜರುಮಾಡಿರುವುದಿಲ್ಲ ಎಂದರೆ ಪಹಣಿ ಇರುವುದಿಲ್ಲ.

ನೀವು ಹಾಜರುಮಾಡಿರುವ ಸರ್ವೆ ನಂ. 43 ರ ಪಹಣಿಯಲ್ಲಿ ಇರುವ ನಾರಾಯಣಸ್ವಾಮಿ ಬಿನ್ ಚಿಕ್ಕನಾರಾಯಣಪ್ಪ, ವೆಂಕಟರಾಮಪ್ಪ ಬಿನ್ ಮುನಿಶಾಮಪ್ಪ ರವರಿಗೂ ನಿಮಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸಂಬಂಧ ಇರುವುದಿಲ್ಲ ರಸ್ತೆಗೆ ಆ ಕಡೆ ಅವರು ಇರುತ್ತಾರೆ. ಸರ್ವೆ ನಂ. 43 ರಲ್ಲಿ ಯಾವತ್ತಿಗೂ ನೀವು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 43 ರಲ್ಲಿ ಪ್ರತಿವಾದಿಗಳಾದ ನಾರಾಯಣಸ್ವಾಮಿ ಮತ್ತು ಮಂಜುನಾಥ ರವರು ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ ನಾವು ಸ್ವಾಧೀನ ಇರುತ್ತೇವೆ. ನೀವು ಸ್ವಾಧೀನದಲ್ಲಿ ಇಲ್ಲದೆ ಇದ್ದರೂ ಕೂಡ ಸ್ವಾಧೀನದಲ್ಲಿ ಇರುತ್ತೇವೆ ಅಂತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ನೀಡಬೇಕು ಎಂಬ ಉದ್ದೇಶದಿಂದ ಯಾವುದೇ ಆದಾರ ಇಲ್ಲದೆ ಇಲ್ಲರೂ ಕೂಡ ಸುಳ್ಳು ದಾವೆ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.